**ಸಿ.ಸಿ.ನಂ.**:3578/2025

ಸಿ ಡಬ್ಲೂ.1

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **24-04-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ. ಎಸ್ ಯು ಎ ವಕೀಲರಿಂದ**

1. ಗೋಕರ್ಣ ಬಸ್ ನಿಲ್ದಾಣದ ಆವರಣದ ಎಳಗಡೆ ಕಟ್ಟುತ್ತಿರುವ ಕಟ್ಟಡವು ಸರಕಾರದಿಂದ ನೀಡಿದಂತಹ ಟೆಂಡರ ಪ್ರಕ್ರಿಯೇಯಿಂದ ಆಗುತ್ತಿದೆ ಎಂದರೆ ಸರಿ. ಗೋಕರ್ಣ ಬಸ್ ನಿಲ್ದಾಣ ಹಾಗೂ ಅದರ ಸುತ್ತಮೂತ್ತಲಿನ ಜಾಗವು ಸರಕಾರಿ ಜಾಗ ಎಂದರೆ ಸರಿ. ಸದ್ರಿ ಜಾಗದಲ್ಲಿ ಕೆಲಸದ ವ್ಯಕ್ತಿಗಣಳನ್ನು ಕರೆದುಕೊಂಡು ಬಂದು ಕಟ್ಟಡವನ್ನು ಕಟ್ಟುತ್ತಿರುವಂತಹ ವ್ಯಕ್ತಿಯು ಆರೋಪಿತನು ಅಲ್ಲ ಎಂದರೆ ಸಾಕ್ಷಿಯು ಆರೋಪಿತನಿಂದ ನಿಯೋಜಿಸಲ್ಪಟ್ಟಂತಹ ಗುತ್ತಿಗೆದಾರನಾಗಿರುತ್ತಾನೆ ಎಂದು ನುಡಿಯುತ್ತಾರೆ. ಸದ್ರಿ ಗುತ್ತಿಗೆದಾರನ ಹೆಸರು ಇಂತಿಕಾಬ್ ಆಲಂ ಆಗಿರುತ್ತದೆ. ಇಂತಿಕಾಬ್ ಆಲಂ ನ ಮೇಲೆ ಈ ಪ್ರಕರಣದಲ್ಲಿ ಆರೋಪಿತ ಎಂದು 60 ಸಾವಿರ ದಂಡ ಪಾವತಿಸಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು 60 ಸಾವಿರ ರೂಪಾಯಿ ಬಾಲ ಕಾರ್ಮಿಕರ ಪುನರ್ವಸತಿ ನಿಧಿ ಎಂದು ಪಾವತಿಸಿರುತ್ತಾರೆ. 60 ಸಾವಿರ ಹಣವನ್ನು ನಾನು ಹಾಗೂ ನಮ್ಮ ಇತರ ಸಿಬ್ಬಂದಿಗಳು ಸೇರಿಸಿ ತುಂಬಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಈ ಪ್ರಕರಣದಲ್ಲಿ ಬಾಲ ಕಾರ್ಮಿಕರು ಎಂದು ಹೇಳಲಾದ ಚಾಸಾ 9 ರಿಂದ ಚಾಸಾ 11 ರವರ ಶಾಲಾ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ಅವರು ಉತ್ತರ ಭಾರತದವರು ಆಗಿರುತ್ತಾರೆ ಎಂದು ನುಡಿಯುತ್ತಾರೆ.

**ಸಿ.ಸಿ.ನಂ.**:3578/2025

ಸಿ ಡಬ್ಲೂ.1

ಪಿ.ಡಬ್ಲ್ಯೂ:1

2. ಯಾವುದೇ ವ್ಯಕ್ತಿಯು ಸಾಮಾನ್ಯವಾಗಿ 11 ರಿಂದ 12 ವರ್ಷ ಎಂದರೆ ಸದ್ರಿ ವ್ಯಕ್ತಿಗೆ ಸಂಬಂಧಿಸಿದ ಶಾಲಾ ದಾಖಲಾತಿಗಳು ಇರುತ್ತವೆ ಎಂದರೆ ಸಾಕ್ಷಿಯು ಅವರು ಶಾಲೆಗೆ ಸೇರಿದ್ದರೆ ಇರುತ್ತದೆ ಎಂದು ನುಡಿಯುತ್ತಾರೆ. ಚಾಸಾ 9 ರಿಂದ 11 ರವರು ಶಾಲೆಗೆ ಸೇರಿದ್ದಾರೋ ಇಲ್ಲವೋ ಎಂಬ ಬಗ್ಗೆ ಅವರ ಶಾಲಾ ದಾಖಲಾತಿಗಳನ್ನು ಪಡೆದುಕೊಳ್ಳುವ ಪ್ರಯತ್ನವನ್ನು ನಾನು ಮಾಡಿರುತ್ತೇನೆ. ಈ ಕುರಿತಾಗಿ ನಾನು ತಪಾಸಣಾ ಸಮಯದಲ್ಲಿ ಬಾಲ ಕಾರ್ಮಿಕರ ಮಕ್ಕಳ ವಯಕ್ತಿಕ ವಿವರಗಳನ್ನು ಸಂಗ್ರಹಿಸಲು ಮುಂದಾದಾಗ ಆರೋಪಿತನು ಹಾಗೂ ಇಂತಿಕಾ ಆಲಂ ಇವರಿಬ್ಬರು ಮಕ್ಕಳನ್ನು ಬೆದರಿಸಿದ್ದು, ಸದ್ರಿ ಮಕ್ಕಳು ಅಳಲು ಆರಂಭಿಸಿದ್ದು, ಸದ್ರಿ ಸಂದರ್ಭದಲ್ಲಿ ಆರೋಪಿತನು ಸದ್ರಿ ದಾಖಲಾತಿಗಳನ್ನು ನಮಗೆ ಹಾಜರು ಮಾಡುವುದಾಗಿ ತಿಳಿಸಿರುತ್ತಾರೆ. ಆರೋಪಿತರು ಮಕ್ಕಳಿಗೆ ಗದರಿಸಿದ್ದಾರೆ ಎನ್ನಲಾದ ಸಮಯದಲ್ಲಿ ನಮ್ಮೊಂದಿಗೆ ಚಾಸಾ 6 ರಿಂದ 8 ರವರು ಇದ್ದರು. ಆರೋಪಿತರು ಮಕ್ಕಳನ್ನು ಗದರಿಸಿದ ಕುರಿತಾಗಿ ಈ ಪ್ರಕರಣದಲ್ಲಿ ಎಲ್ಲಿಯೂ ನಮೂದಿಸಿರುವುದಿಲ್ಲ.

3. ನಿಪಿ1 ರಲ್ಲಿ ನಾನು ಘಟನಾ ಸ್ಥಳದಲ್ಲಿ ಆರೋಪಿತನು ಇರಲಿಲ್ಲ ಆತನು ನಂತರದಲ್ಲಿ ಬಂದಿರುತ್ತಾರೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ಸುಮಾರು 11-30 ಗಂಟೆಗೆ ಆರೋಪಿತನು ಘಟನಾ ಸ್ಥಳಕ್ಕೆ ಬಂದಿರುತ್ತಾನೆ. ಆರೋಪಿತನು ಘಟನೆ ನಡೆದಿದೆ ಎನ್ನಲಾದ ದಿನ ಘಟನಾ ಸ್ಥ,ಳಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 9 ರಿಂದ 11 ರವರ ನೀಡಿದ ಆಧಾರ ಕಾರ್ಡಗಳನ್ನು ನಾನು ಸರಕಾರಿ ಕಛೇರಿಯಲ್ಲಿ ಪರಿಶೀಲನೆ ಮಾಡಿರುವುದಿಲ್ಲ.

4. ಚಾಸಾ 9 ರಿಂದ 11 ರವರ ತಂದೆ ತಾಯಿಗಳ ಕುರಿತಾಗಿ ಅವರ ವಾಸ್ತವ್ಯ ಸ್ಥಳಕ್ಕೆ ಹೋಗಿರುವುದಿಲ್ಲ. ಆಧಾರ ಕಾರ್ಡ ಗಳನ್ನು ನಕಲಿ ಅಧಾರ ಕಾರ್ಡಗಳಾಗಿ ಸೃಷ್ಟಿಸಿಕೊಳ್ಳಬಹುದು

ಎಂದರೆ ಸಾಕ್ಷಿಯು ಈ ಕುರಿಸಾಗಿ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಮಾನ ವಾಗಿ ಒಬ್ಬ ವ್ಯಕ್ತಿಯ ವಯಸ್ಸನ್ನು ಅಂದಾಜು ಮಾಡಲು ಆತನ ಜನನ ಪ್ರಮಾಣ ಪತ್ರವು ಸರಿಯಾದ ದಾಖಲಾತಿ ಎಂದರೆ ಸರಿ. ಭಾರತ ದೇಶದಲ್ಲಿ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಗೂ ನಿಯಮಾನುಸಾರ ಜನನ ದಾಖಲೆ ಸಿಗುತ್ತದೆ ಎಂದರೆ ಸಾಕ್ಷಿಯು ಈ ಕುರಿತಾಗಿ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಜನನ ಪ್ರಮಾಣ ಪತ್ರ ಎಂಬ ದಾಖಲಾತಿ ಇದೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ. ಚಾಸಾ 9 ರಿಂದ 11 ರವರ ಆಧಾರ ಕಾರ್ಡಿಗೆ ಯಾವುದೇ ಮೊಬೈಲ ನಂಬರನ ಲಿಂಕ್ ಆಗಿರುವುದಿಲ್ಲ ಎಂದರೆ ಸರಿ. ನಿಪಿ1 ರಲ್ಲಿ ಮಕ್ಕಳ ವಿವರ ಎಂದು ಇರುವಲ್ಲಿ ದಾಖಲಿಸಿದ ಸಂಚಾರಿ ವಾಣಿ ಸಂಖೆ ಯಾರದ್ದು ಎಂದರೆ ಸಾಕ್ಷಿಯು ಚಾಸಾ 9 ರಿಂದ 11 ರವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮೊಬೈಲ್ ಸಂಖ್ಯೆಯು ಯಾರ ಹೆಸರಿಗೆ ನೋಂದಾವಣಿ ಆಗಿರುತ್ತದೆ ಎಂಬ ಬಗ್ಗೆ ತಿಳಿದುಕೊಂಡಿರುವುದಿಲ್ಲ. ಸದ್ರಿ ಮೊಬೈಲ ಸಂಖ್ಯೆ ಎಲ್ಲಿ ಚಲಾವಣೆ ಇರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಕುರಿತಾಗಿ ನಾನು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲ.

5. ಘಟನಾ ಸ್ಥಳದಲ್ಲಿ ಕಟ್ಟುತ್ತಿದ್ದಾರೆ ಎನ್ನಲಾದ ಕಟ್ಟಡದ ಕುರಿತಾಗಿ ಮಾನ್ಯ ಹಿರಿಯ ನ್ಯಾಯಾದೀಶರ ನ್ಯಾಯಾಲಯ, ಕುಮಟಾದಲ್ಲಿ ಸಿವಿಲ್ ಪ್ರಕರಣ ನಡೆಯುತ್ತಿರುವ ಕುರಿತಾಗಿ ನನಗೆ ಮಾಹಿತಿ ಇರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಆರೋಪವನ್ನು ಆರೋಪಿ ಮಾಡಲಿಲ್ಲ ಎಂದರೆ ಸರಿಯಲ್ಲ ಆರೋಪಿತನ ವಿರುದ್ಧ ನಾನು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಚಾಸಾ 9 ರಿಂದ 11 ರವರನ್ನು ಕೆಲಸಕ್ಕಾಗಿ ನೇಮಿಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ.

**ಸಿ.ಸಿ.ನಂ.:**3578/2025

ಸಿ ಡಬ್ಲೂ.1

ಪಿ.ಡಬ್ಲ್ಯೂ:1

6. ಸಿಮೆಂಟ ಕೆಲಸ ಮಾಡುವವರಿಗೆ ಕೈ ಸುಡುತ್ತದೆ ಎಂದರೆ ಸರಿ. ಚಾಸಾ 9 ರಿಂದ 11 ರವರಿರಗೆ ಈ ಕುರಿತಾಗಿ ಕೆಲಸ ಮಾಡಿಸಿದ ಕುರಿತಾಗಿ ಗೋಕರ್ಣದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪರೀಕ್ಷೆ ಮಾಡಿಸಿದ್ದೀರಾ ಎಂದರೆ ಮಕ್ಕಳು ಸದ್ರಿ ಕೆಲಸಕ್ಕೆ ಸಹಾಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಹೇಳಿಕೆಯ ಪ್ರಕಾರ ಪ್ಲಾಸ್ಟರಿಂಗ್ ಕೆಲಸಕ್ಕೆ ಸಹಾಯ ಮಾಡುವವರು ಸಿಮೆಂಟನ್ನು ಮುಟ್ಟಬೇಕಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಚರಾಸಾ 9 ರಿಂದ 111 ರವರು ಮುಖ್ಯ ಕೆಲಸಗಾರರಿಗೆ ಸಲಕರಣೆಗಳನ್ನು ನೀಡುತ್ತಿದ್ದರು ಎಂದು ನುಡಿಯುತ್ತಾರೆ.

7. ಮುಖ್ಯ ಕೆಲಸಗಾರರು ಯಾರು ಯಾಗರು ಕೆಲಸ ಮಾಡುತ್ತಿದ್ದರು ಎಂದು ವರದಿಯನ್ನು ಪಡೆದುಕೊಂಡಿರುವುದಿಲ್ಲ. ಮುಖ್ಯ ಕೆಲಸಗಾರರು ಕೆಲಸ ಮಾಡಲು ಬೇಕಾದ ಸಲಕರಣೆಗಳನ್ನು ಅವರೇ ಇಟ್ಟುಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ಬಾಲ ಕಾರ್ಮಿಕರನ್ನು ನೇಮಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಬಾಲ ಕಾರ್ಮಿಜಕರು ಇರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಆರೋಪಿತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ